ಶ್ರೀ ಎಸ್.ಎಂ. ಕೃಷ್ಣ(ಮುಖ್ಯ ಮಂತ್ರಿಗಳು) :

ಅ)4,467 ನಿವೇಶನಗಳು.

ಆ) 10,000 ನಿವೇಶನಗಳು.

ಇ)ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ನಿವೇಶನಗಳ ಹಂಚಿಕೆಯ ಬಗ್ಗೆ ಪತ್ರಿಕೆಗಳಲ್ಲಿ ಅಧಿಸೂಚನೆಯನ್ನು ಪ್ರಕಟಿಸಿ, ಸಾರ್ವಜನಿಕರಿಂದ ಸ್ವೀಕರಿಸಲಾಗುವ ಅರ್ಜಿಗಳನ್ನು ನಿವೇಶನ ಹಂಚಿಕೆ ನಿಯಮಾವಳಿಗಳಪ್ರಕಾರ ಪರಿಶೀಲಿಸಿ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ನಿವೇಶನ ಹಂಚಿಕೆ) ನಿಯಮಾವಳಿ 1984ರ ನಿಯಮ 11ರ ಪ್ರಕಾರ ಅರ್ಜಿದಾರರುಗಳ ಹೆಚ್ಚಿನ ಪ್ರಯತ್ನ ಮತ್ತು ವಯಸ್ಸಿನ ಹಿರಿತನದ ಆಧಾರದ ಮೇಲೆ ಅರ್ಹ ಅರ್ಜಿದಾರರ ಆದ್ಯತಾ ಪಟ್ಟಿಯನ್ನು ಸಿದ್ದಪಡಿಸಿ, ಹಂಚಿಕೆ ಸಮಿತಿ ಮತ್ತು ಪ್ರಾಧಿಕಾರದ ಅನುಮೋದನೆ ಪಡೆದು, ಅರ್ಹ ಹಂಚಿಕೆದಾರರ ಪಟ್ಟಿಯನ್ನು ಪ್ರಕಟಿಸಲಾಗುವುದು. ನಂತರ ಅಂತಹ ಹಂಚಿಕೆದಾರರಿಗೆ ಪ್ರತ್ಯೇಕವಾಗಿ ಹಂಚಿಕೆ ಪತ್ರಗಳನ್ನು ವಿತರಿಸಲಾಗುವುದು.

ಬೆಂಗಳೂರು ಮಹಾನಗರ ಪಾಲಿಕೆ ಪಾವತಿಸಬೇಕಾದ ಸಾಲದ ಕುರಿತು

2693 (3201)ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ): ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ)ಬೆಂಗಳೂರು ಮಹಾನಗರ ಪಾಲಿಕೆಯು 1999-2000ನೇ ಸಾಲಿನವರೆಗೆ ಯಾವ ಯಾವ ಸಂಸ್ಥೆಗಳಿಗೆ ಸಾಲದ ಮರುಪಾವತಿ ಮಾಡ ಬೇಕಿದೆ? ಇದರಲ್ಲಿ ಅಸಲು ಹಣವೆಷ್ಟು? ಹಾಗೂ ಬಡ್ಡಿ ಹಣವೆಷ್ಟು? (ಸರ್ಕಾರಿ ಆರೆ ಸರ್ಕಾರಿ ಹಾಗೂ ಕಂಟ್ರಾಕ್ಟರ್‌ದಾರರ ಬಿಲ್‌ಗಳು ಸೇರಿದಂತೆ ಪೂರ್ಣ ವಿವರ ನೀಡುವುದು)

ಶ್ರೀ ಎಸ್.ಎಂ. ಕೃಷ್ಣ (ಮುಖ್ಯ ಮಂತ್ರಿಯವರು):

ಸಂಸ್ಥೆಯ ಹೆಸರು	ಒಟ್ಟು ಸಾಲ	ಮರುಪಾವತಿ ಅಸಲು	ಬಡ್ಡಿ	ಉಳಿದ ಸಾಲ
	(ರೂ. ಲಕ್ಷಗಳಲ್ಲಿ)			
1.ಹೂಡ್ಕೋ	5714.25	1330.02	2514.46	4384.23
2.ಕೆಯುಐಡಿಎಫ್‌ಸಿ	4759.00	-	330.13	4759.00
ಒಟ್ಟು	**10473.25**	**1330.02**	**2844.59**	**9143.23**